

ವಿಶ್ವದ ಅತಿದೊಡ್ಡ ಉಪ್ಪು ಮರುಭೂಮಿಗಳಲ್ಲಿ ಒಂದೆಂಬ ಹೆಗ್ಗಳಿಕೆ ಹೊಂದಿರುವ 'ಗ್ರೇಟ್ ರಣ್ ಆಫ್ ಕಚ್'

# ಕಚ್ ಮರುಭೂಮಿಯ ಓಯಸಿಸ್ ರಣ್ ಉತ್ಸವ

■ ಎಚ್.ಪಿ. ಶೆಲ್ಲಿಕೇರಿ

'ಆಪ್ ನೆ ಕಚ್ ನಹಿ ದೇಖಾ ತೊ ಕುಛ್ ನಹಿ ದೇಖಾ' –ಇದು ಗುಜರಾತ್ ರಾಜ್ಯದ ಪ್ರವಾಸೋದ್ಯಮ ಇಲಾಖೆಯ ಜಾಹೀರಾತೊಂದರಲ್ಲಿ ಕೇಳಿಬರುವ ಒಂದು ಮಾಂತ್ರಿಕ ಧ್ವನಿ. ಕಚ್‌ನ ಅದ್ಭುತ ಶ್ವೇತ ಮರುಭೂಮಿ, ಶ್ರೀಮಂತ ಸಂಸ್ಕೃತಿ ಮತ್ತು ಕರಕುಶಲತೆಯನ್ನು ಸೂಚಿಸುವ ಈ ನುಡಿಗಟ್ಟನ್ನು ಗುಜರಾತ್ ಪ್ರವಾಸೋದ್ಯಮ ಇಲಾಖೆ ಬಳಸಿಕೊಂಡಿದೆ. ಕಚ್‌ನ ಮಹತ್ವವನ್ನು ಸಾರುವ ಈ ಜಾಹೀರಾತಿನಲ್ಲಿ ಉಪ್ಪು ಮರಳಿನ ವಿಶಾಲ ರಣ್ ಮರುಭೂಮಿಯಲ್ಲಿ ಹೆಜ್ಜೆ ಹಾಕುತ್ತ ಆಗ ಆ ಇಲಾಖೆಯ ರಾಯಭಾರಿಯಾಗಿದ್ದ ಬಾಲಿವುಡ್ ಸ್ಟಾರ್ ಅಮಿತಾಭ್ ಬಚ್ಚನ್ ಈ ನುಡಿಗಳನ್ನು ಆಡುತ್ತಾರೆ.

ಯಾವ ದಿಕ್ಕಿಗೆ ದೃಷ್ಟಿ ಹಾಯಿಸಿದರೂ ಮುಗಿಯದ ವಿಶಾಲ ಉಪ್ಪು ಮರಳಿನ ಈ ಮರುಭೂಮಿ ಮನಸೂರೆಗೊಳ್ಳುವ ಭೂದೃಶ್ಯವನ್ನು ಒದಗಿಸುತ್ತದೆ. ಮತ್ತೆ ಮತ್ತೆ ನೋಡಬೇಕೆಂಬ ಹಂಬಲ ಹುಟ್ಟಿಸುವ ಇಂತಹ ಅದ್ಭುತ ತಾಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ನಡೆದರೆ ಮಾಯಾಲೋಕ ಸೃಷ್ಟಿಯಾಗದಿದ್ದೀತೆ? ಅದನ್ನು ಸಾಕ್ಷೀಕರಿಸುವ ಒಂದು ಹಬ್ಬವೇ 'ರಣ್ ಉತ್ಸವ'.

'ರಣ್ ಆಫ್ ಕಚ್' ಅಂದರೆ ಕಚ್‌ನ ಮರುಭೂಮಿ ಎಂದರ್ಥ. ವಾಸ್ತವದಲ್ಲಿ ಇದು ಬಿರುಕುಬಿಟ್ಟ ಉಪ್ಪು ಮರಳಿನ ಮರುಭೂಮಿ. ಮಳೆಗಾಲದಲ್ಲಿ ಕಚ್ ಕೊಲ್ಲಿಯ ಸಮುದ್ರದ ನೀರಿನ ಪ್ರವಾಹದಿಂದ ಈ ಜವುಗು ಪ್ರದೇಶದಲ್ಲಿ ಸಂಗ್ರಹಗೊಂಡ ಸಮುದ್ರದ ನೀರು ಮತ್ತು ಮಳೆ ನೀರು ಮುಂಗಾರು ಮುಗಿದ ನಂತರ ಆವಿಯಾಗಿ ಮರುಭೂಮಿಯ ನೆಲದ ಮೇಲೆ ಉಪ್ಪಿನ ಹರಳುಗಳ ದಪ್ಪ, ಬಿಳಿ ಹೊರಪದರುಗಳಾಗಿ ರೂಪಾಂತರಗೊಳ್ಳುತ್ತದೆ. ಹೀಗಾಗಿ ಇದನ್ನು 'ವೈಟ್ ರಣ್' ಅಥವಾ 'ಸಫೇದ್ ರಣ್' ಎಂತಲೂ ಕರೆಯುತ್ತಾರೆ. ಗುಜರಾತಿನಲ್ಲಿ ಸುಮಾರು 7,500 ಚ.ಕಿ.ಮೀ. ವಿಸ್ತೀರ್ಣದಲ್ಲಿ 'ಗ್ರೇಟ್ ರಣ್ ಆಫ್ ಕಚ್' ಹರಡಿಕೊಂಡಿದ್ದು, ಇದು ವಿಶ್ವದ ಅತಿದೊಡ್ಡ ಉಪ್ಪು ಮರುಭೂಮಿಗಳಲ್ಲಿ ಒಂದು ಎಂಬ ಹೆಗ್ಗಳಿಕೆ ಹೊಂದಿದೆ. ಹುಣ್ಣಿಮೆ ರಾತ್ರಿಗಳಲ್ಲಂತೂ ಬಿಳಿ ಉಪ್ಪಿನ ದಿಬ್ಬಗಳ ಮೇಲೆ ಬೀಳುವ ಬೆಳದಿಂಗಳು ಪ್ರತಿಫಲನಗೊಂಡು ಸೃಷ್ಟಿಯಾಗುವ ದೃಶ್ಯವೈಭವ ಮನಸೂರೆಗೊಳಿಸುತ್ತದೆ.

ಕಚ್ ಜಿಲ್ಲೆ ಸಂಗೀತ, ನೃತ್ಯ, ಕಲೆ, ಕರಕುಶಲ ವಸ್ತುಗಳು ಮತ್ತು ಪ್ರಕೃತಿಯ ಆಚರಣೆಯ ನಾಡು. ಈ ಜಿಲ್ಲೆಯ ಶ್ರೀಮಂತ ಸಂಸ್ಕೃತಿಯನ್ನು ಪ್ರದರ್ಶಿಸಲು ಗುಜರಾತಿನ ಪ್ರವಾಸೋದ್ಯಮ ಇಲಾಖೆ ಪ್ರತಿವರ್ಷ 'ರಣ್ ಉತ್ಸವ'ವನ್ನು ಆಯೋಜಿಸುತ್ತದೆ. 2005ರಲ್ಲಿ ಮೂರು ದಿನಗಳ